# ವಿಶ್ವನಂದಿನಿ ಲೇಖನಮಾಲೆ – 85

## ಗುರುವಂದನೆ

ನಮ್ಮೆಲ್ಲರ ಮೇಲಿನ ಅನಂತ ಕಾರುಣ್ಯದಿಂದ, ಪರಾಶರ ಸತ್ಯವತಿಯರಲ್ಲಿ ಅವತರಿಸಿ, ಅನಂತ ವೇದಗಳನ್ನು ಉದ್ಧರಿಸಿ, ಅವುಗಳ ಅರ್ಥವನ್ನು ನಿರ್ಣಯಿಸುವ ಬ್ರಹ್ಮಸೂತ್ರಗಳನ್ನು ರಚಿಸಿ, ಆ ಅನಂತ ವೇದಗಳ ಅರ್ಥವನ್ನು ದೃಷ್ಟಾಂತ-ಕಥೆಗಳ ಮೂಲಕ ಪ್ರತಿಪಾದಿಸುವ ಮಹಾಭಾರತವನ್ನು ರಚಿಸಿ, ಅದರ ಸಾರವನ್ನು ಶ್ರೀಮದ್ ಭಾಗವತ ಎಂಬ ಪರಮಾದ್ಭುತ ಗ್ರಂಥದಲ್ಲಿ ಹೆಣೆದಿಟ್ಟು ನಮಗೆ ನೀಡಿದ ಸರ್ವಗುರ್ವಂತರ್ಯಾಮಿಯಾದ ನಮ್ಮ ಮೂಲಗುರು ಲಕ್ಷ್ಮೀಪತಿ ಶ್ರೀ ವೇದವ್ಯಾಸದೇವರಿಗೆ ಅನಂತಾನಂತನಮಸ್ಕಾರಗಳು.

**ನಮೋಽಸ್ತು ತಸ್ಮೈ ಗುರವೇ ಸುರಾಣಾಂ**
**ವ್ಯಾಸಾಯ ಕಾರುಣ್ಯಗುಣಾರ್ಣವಾಯ ।**
**ಯೋ ನಾಪ್ರದಾಸ್ಯದ್ ಯದಿ ವೇದಸಾರಂ**
**ಸಂಸಾರಭಂಗಃ ಶಶಶೃಂಗಕಲ್ಪಃ ।**

‘ದೇವತೆಗಳಿಗೂ ಗುರುವಾದ, ಕರುಣಾಸಮುದ್ರರಾದ ಶ್ರೀ ವೇದವ್ಯಾಸದೇವರಿಗೆ ನನ್ನ ನಮಸ್ಕಾರಗಳು. ವೇದಗಳ ಸಾರವನ್ನು ಅರ್ಥಾತ್ ವೇದಾರ್ಥಗಳನ್ನೊಳಗೊಂಡ ಗ್ರಂಥಗಳನ್ನು ಅವರು ನಮಗೆ ನೀಡಿರದಿದ್ದಲ್ಲಿ ನಮಗೆ ಮುಕ್ತಿ ಎಂದಿಗೂ ದೊರೆಯಲು ಸಾಧ್ಯವಿರುತ್ತಿರಲಿಲ್ಲ’

ಸ್ವಯಂ ಪರಮಾತ್ಮನೇ ರಚಿಸಿದ ಆ ಸರ್ವಸರ್ವೋತ್ತಮಗ್ರಂಥಗಳ ಅಭಿಪ್ರಾಯವನ್ನು ತಿಳಿಸಲು, ಕೇವಲ, ಕೇವಲ ನಮ್ಮ ಮೇಲಿನ ಕಾರುಣ್ಯದಿಂದ ಸತ್ಯಲೋಕದಿಂದ ಭೂಲೋಕಕ್ಕಿಳಿದು ಬಂದ ನಮ್ಮ ಆದಿಗುರು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಗೆ ನಮ್ಮ ಅನಂತಾನಂತ ನಮಸ್ಕಾರಗಳು

**ಲಸತು ಶ್ರೀಮದಾನಂದ-**
**ತೀರ್ಥೇಂದುರ್ನೋ ಹೃದಂಬರೇ**
**ಯದ್ವಚಶ್ಚಂದ್ರಿಕಾ ಸ್ವಾಂತ-**
**ಸಂತಾಪಂ ವಿನಿಕೃಂತತಿ**

‘ಶ್ರೀಮದಾಚಾರ್ಯರು ನಮ್ಮ ಹೃದಯಾಂಬರದ ಚಂದಿರ. ಅವರ ಮಾತೇ ಚಂದ್ರಿಕೆ. ಕಾರಣ, ಅವರ ಮಾತೆಂಬ ಬೆಳದಿಂಗಳು ನಮ್ಮ ಹೃದಯದ ಅಂಧಕಾರವನ್ನು ನೀಗುತ್ತದೆ’

ಸಮಸ್ತ ವೇದಶಾಸ್ತ್ರಗಳಿಗೆ ಅಭಿಮಾನಿನಿಯಾಗಿ, ನಮ್ಮ ಮಾತು ಮನಸ್ಸುಗಳನ್ನು ನಿಯಮಿಸುವ ಗುರುಪತ್ನಿ, ಮುಖ್ಯಪ್ರಾಣನ ನಲ್ಮೆಯ ಮಡದಿ, ವಾಗ್ದೇವತೆ ಭಾರತೀದೇವಿಗೆ ನಮ್ಮ ಅನಂತಾನಂತ ನಮಸ್ಕಾರಗಳು.

ಆ ಸುರಗುರು ಮುಖ್ಯಪ್ರಾಣ ಅವತರಿಸಿಬಂದಾಗ ತಾವೂ ಅವತರಿಸಿ ಬಂದು ಆ ಗುರುಗಳ ಸೇವೆಯನ್ನು ಮಾಡಿ, ಸಜ್ಜನವೃಂದದ ಮೇಲೆ ಅನುಗ್ರಹವನ್ನು ಮಾಡಿದ ಶ್ರೀ ವಿಷ್ಣುತೀರ್ಥರು, ಶ್ರೀ ಪದ್ಮನಾಭತೀರ್ಥರು, ಶ್ರೀಹೃಷೀಕೇಶತೀರ್ಥರು, ಶ್ರೀ ಜನಾರ್ದನತೀರ್ಥರು, ಶ್ರೀನರಸಿಂಹತೀರ್ಥರು, ಶ್ರೀ ಉಪೇಂದ್ರತೀರ್ಥರು,  ಶ್ರೀವಾಮನ ತೀರ್ಥರು, ಶ್ರೀರಾಮತೀರ್ಥರು, ಶ್ರೀ ಅಧೋಕ್ಷಜತೀರ್ಥರು, ಶ್ರೀ ಸತ್ಯತೀರ್ಥರು ಮುಂತಾದ

ಧನ್ಯಸಂನ್ಯಾಸಿವರ್ಯರಿಗೆ ನಮ್ಮ ಅನಂತಾನಂತನಮಸ್ಕಾರಗಳು.

ಆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಪರಮಗಂಭೀರವಾದ ಶಾಸ್ತ್ರವನ್ನು ಪರಮಾದ್ಭುತವಾಗಿ ವ್ಯಾಖ್ಯಾನ ಮಾಡಿ, ಶ್ರೀಮದಾಚಾರ್ಯರು ತೋರಿಕೊಟ್ಟ ನಾರಾಯಣ ಎನ್ನುವ ನಿಧಿಯನ್ನು ನಮಗೆ ‘ನೀಡಿದ’ ಶ್ರೀಮಟ್ಟೀಕಾಕೃತ್ಪಾದರಿಗೆ ಅನಂತಾನಂತನಮಸ್ಕಾರಗಳು.

ಆ ಶ್ರೀಮದಾಚಾರ್ಯರ ಮಹಾಕಾರುಣ್ಯಕ್ಕೆ ಪಾತ್ರರಾಗಿ ಶ್ರೇಷ್ಠ ಗ್ರಂಥಗಳನ್ನು ರಚನೆ ಮಾಡಿದ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರಿಗೆ, ಶ್ರೀಮದಾಚಾರ್ಯರ ಕಥಾಮೃತದ ಸವಿಯನ್ನುಣಿಸಿದ  ಶ್ರೀ ನಾರಾಯಣಪಂಡಿತಾಚಾರ್ಯರಿಗೆ ಅನಂತಾನಂತನಮಸ್ಕಾರಗಳು.[1]

---

[1] ಈ ಇಬ್ಬರೂ ಪಂಡಿತಾಚಾರ್ಯರು, ಸಮಸ್ತ ಮಾಧ್ವಪರಂಪರೆಗೆ ಜ್ಞಾನವನ್ನನುಗ್ರಹಿಸಿದ ಮಹಾನುಭಾವರಾದ್ದರಿಂದ ಮತ್ತು ಅಂತ್ಯದಲ್ಲಿ ಸಂನ್ಯಾಸವನ್ನು ಸ್ವೀಕರಿಸಿ ಸಾಧನೆಯನ್ನು ಮಾಡಿದ ಕಾರಣಕ್ಕೆ ಯತಿಗಳ ಮಧ್ಯದಲ್ಲಿಯೇ ಇವರಿಗೆ ನಮಸ್ಕಾರಗಳನ್ನು ಸಲ್ಲಿಸಬೇಕು.

ವಿದ್ಯೆಯಲ್ಲಿ ಶ್ರೀಮಟ್ಟೀಕಾಕೃತ್ಪಾದರ ಪ್ರಶಿಷ್ಯರಾದ, ಶ್ರೀ ರಾಜೇಂದ್ರತೀರ್ಥಗುರುಸಾರ್ವಭೌಮರ ಪ್ರೀತಿಯ ಶಿಷ್ಯರಾದ ಶ್ರೀ ವಿಬುಧೇಂದ್ರರಲ್ಲಿ ಅಧ್ಯಯನವನ್ನು ಮಾಡಿ, ಸಮಸ್ತ ಶ್ರೀಪಾದರಿಗೂ ರಾಜರಾಗಿ ಶ್ರೀಪಾದರಾಜರೆಂದು ಸಮಸ್ತರಿಂದ ಸಂಸ್ತೂಯಮಾನರಾಗಿ, ಭಗವಂತನನ್ನು ಒಲಿಸಿಕೊಳ್ಳುವ ಅತೀಸುಲಭದ ಮಾರ್ಗವನ್ನು ಸ್ವಯಂ ಆಚರಿಸಿ ತೋರಿಸಿದ ಶ್ರೀಶ್ರೀಪಾದರಾಜಗುರುವರೇಣ್ಯರಿಗೆ ಅನಂತಾನಂತ ನಮಸ್ಕಾರಗಳು.

ಶ್ರೀಮದಾಚಾರ್ಯರು ರಚಿಸಿದ ಶಾಸ್ತ್ರ ದೇವರ ವಿಗ್ರಹ. ಅದಕ್ಕೆ ಭದ್ರವಾದ ಗರ್ಭಗುಡಿಯನ್ನು ನಿರ್ಮಾಣ ಮಾಡಿದವರು ಶ್ರೀಮಟ್ಟೀಕಾಕೃತ್ಪಾದರು. ಆ ಗರ್ಭಗುಡಿಗೆ ಭವ್ಯದೇವಸ್ಥಾನವನ್ನು ಕಟ್ಟಿ, ಇಡಿಯ ಮಾಧ್ವತತ್ವಸಾಮ್ರಾಜ್ಯಕ್ಕೆ ಎಂದೆಂದಿಗೂ ಅಲುಗಾಡಿಸಲು ಸಾಧ್ಯವಿಲ್ಲದ ಸುಭದ್ರ ಕೋಟೆಯನ್ನು ನಿರ್ಮಿಸಿದ, ಮುನಿತ್ರಯರಲ್ಲೊಬ್ಬರಾದ, **“ಈಸು ಮುನಿಗಳಿದ್ದೇನು ಮಾಡಿದರು ವ್ಯಾಸಮುನಿ ಮಧ್ವಮತವನುದ್ಧರಿಸಿದ”** ಎಂಬ ಶಾಶ್ವತ

ಯಶಸ್ಸಿಗೆ ಪಾತ್ರರಾದ ಶ್ರೀಮಚ್ಚಂದ್ರಿಕಾಚಾರ್ಯರು ನಮ್ಮನ್ನು ಅನುಗ್ರಹಿಸಲಿ. ಆಚಾರ್ಯರ ಶಾಸ್ತ್ರದ ಸವಿಯನ್ನು ಉಣ್ಣುವ ಸೌಭಾಗ್ಯವನ್ನು ದಯಪಾಲಿಸಲಿ.

ಮತವೆಂದರೆ ಮಧ್ವಮತವು, ದೇವರೆಂದರೆ ಶ್ರೀಹರಿ ಎನ್ನುವ ತತ್ತ್ವಗಳನ್ನು ತಮ್ಮ ಸಕಲ ಗ್ರಂಥಗಳಲ್ಲಿ ವಿಧವಿಧವಾಗಿ ಪ್ರತಿಪಾದಿಸಿ, ದೇವರನ್ನು ಕಣ್ಣಾರೆ ಕಂಡು, ಅವನನ್ನು ಪರಿಪರಿಯಾಗಿ ಆರಾಧಿಸಿ, ಭಕ್ತಕೋಟಿಯ ದುಃಖದುಮ್ಮಾನಗಳನ್ನು ಕಳೆದ ಯತಿವರೇಣ್ಯರಾದ ಶ್ರೀವಾದಿರಾಜಗುರು- ಸಾರ್ವಭೌಮರು ನಮ್ಮನ್ನು ವಾತ್ಸಲ್ಯದಿಂದ ಅನುಗ್ರಹಿಸಲಿ. ನಮ್ಮನ್ನು ಸನ್ಮಾರ್ಗದಲ್ಲಿರಿಸಿ ನಾವು ಶ್ರೀಹರಿಯ ಅನುಗ್ರಹವನ್ನು ಪಡೆಯುವಂತೆ ಆಶೀರ್ವದಿಸಲಿ.

ಶ್ರೀಮಚ್ಚಂದ್ರಿಕಾಚಾರ್ಯರ ಪ್ರೇಮದ ಶಿಷ್ಯರಾಗಿ, ಶ್ರೀ ಸುರೇಂದ್ರತೀರ್ಥರ ನೆಚ್ಚಿನ ಶಿಷ್ಯರಾಗಿ ಯಾರಿಗೂ ಮಾಡಲಿಕ್ಕಾಗದ ಸಾಧನೆಯನ್ನು ಸುಲಭದಿಂದಲಿ ಮಾಡಿ, ಪ್ರತಿವಾದಿಗಳ ಮಧ್ಯದಲ್ಲಿ ಸಿಂಹದಂತೆ ರಾರಾಜಿಸುತ್ತ ಶ್ರೀಮನ್ಮಧ್ವಸಿದ್ಧಾಂತದ

ದೇವಸ್ಥಾನದ ಭವ್ಯಗೋಪುರಗಳಿಗೆ ಮನಮೋಹಕ ಅಲಂಕಾರಗಳನ್ನು ತಮ್ಮ ಗ್ರಂಥಗಳಿಂದ ಮಾಡಿದ ಶ್ರೀ ವಿಜಯೀಂದ್ರಗುರುಸಾರ್ವಭೌಮರು ನಮ್ಮನ್ನು ದುಷ್ಟರಿಂದ ಕಾಪಾಡಲಿ. ದುರ್ಜನರಿಂದ ನಮ್ಮನ್ನು ದೂರವಿರಿಸಲಿ.

ಶ್ರೀಮದಾಚಾರ್ಯರ, ಶ್ರೀಮಟ್ಟೀಕಾಕೃತ್ಪಾದರ ಮತ್ತು ಶ್ರೀಮಚ್ಚಂದ್ರಿಕಾಚಾರ್ಯರ ಅಭಿಪ್ರಾಯವನ್ನು ತಿಳಿಯಾದ ಭಾಷೆಯಲ್ಲಿ ಬರೆದು, ಸಕಲ ಸಂದೇಹಗಳಿಗೂ ಪ್ರೀತಿಯಿಂದ ಉತ್ತರಿಸುವ, ಸಮಗ್ರ ಮಾಧ್ವರ ತಾಯಿಯ ಸ್ಥಾನದಲ್ಲಿರುವ ನಮ್ಮ ರಾಘಪ್ಪ, ಆ ಮಂತ್ರಾಲಯ ಪ್ರಭುಗಳು, ಆ ರಾಘವೇಂದ್ರತೀರ್ಥಗುರುಸಾರ್ವಭೌಮರು ನಮ್ಮನ್ನು ಕಾಪಾಡಲಿ. ತಾವು ರಚಿಸಿರುವ ಸ್ವಚ್ಛ ತಿಳಿನೀರಿನ ಕೊಳ — ಶಾಸ್ತ್ರತೀರ್ಥದಲ್ಲಿ — ವಿಹರಿಸಲು ನಮಗೆ ಆಜ್ಞೆಯನ್ನು ಮಾಡಲಿ.

ಅ ಶ್ರೀಮದಾಚಾರ್ಯರ ಗ್ರಂಥಗಳನ್ನು ಅಧ್ಯಯನ ಮಾಡಲೆಂದೇ, ತಿಳಿದ ತತ್ವಗಳನ್ನು ಕಾರುಣ್ಯದಿಂದ ತಿಳಿಸಲೆಂದೇ ಅವತರಿಸಿ ಬಂದ, ಆಚಾರ್ಯರ

ಶ್ರೇಷ್ಠ ಸನ್ನಿಧಾನಕ್ಕೆ ಪಾತ್ರರಾದ ಶ್ರೀ ವಿಜಯಧ್ವಜರು, ಶ್ರೀ ವೇದಾಂಗತೀರ್ಥರು, ಶ್ರೀ ರಘೂತ್ತಮರು, ಶ್ರೀ ರಾಮಚಂದ್ರತೀರ್ಥರು, ಶ್ರೀ ಶೇಷಚಂದ್ರಿಕಾಚಾರ್ಯರು, ಶ್ರೀ ಭಾಷ್ಯದೀಪಿಕಾ-ಚಾರ್ಯರು ಮುಂತಾದ ಮಹಾಯತಿವರೇಣ್ಯರಿಗೆ ಅನಂತಾನಂತನಮಸ್ಕಾರಗಳು.

ಶ್ರೀ ರಾಜೇಂದ್ರತೀರ್ಥರ ಚರಣಸೇವೆಯನ್ನು ಮಾಡಿ ಮಹಾಜ್ಞಾನವನ್ನು ಪಡೆದು, ದುಸ್ಸಿದ್ಧಾಂತಗಳ ಅರಣ್ಯಕ್ಕೆ ಬೆಂಕಿಯನ್ನಿಟ್ಟ ಶ್ರೀ ವಿಷ್ಣುದಾಸಾ-ಚಾರ್ಯರು, ನಿರಂತರ ಭಗವದಾರಾಧನೆಯಿಂದ ಮಹಾಸಾಧನೆಯನ್ನು ಮಾಡಿದ ಶ್ರೀ ಯಾದವಾರ್ಯರಿಗೆ ನಮ್ಮ ಅನಂತಾನಂತ ನಮಸ್ಕಾರಗಳು.

ಈ ಎಲ್ಲ ಗುರುಗಳು ಕಾರುಣ್ಯದಿಂದ ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮಿಂದ ಶಾಸ್ತ್ರಾಧ್ಯಯನವನ್ನು ನಿರಂತರ ಮಾಡಿಸಲಿ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ತಿಳಿಸಿದ ಸರ್ವೋತ್ತಮತತ್ವಗಳನ್ನು ತಿಳಿಯಾದ

ಕನ್ನಡಭಾಷೆಯಲ್ಲಿ ಸರಳವಾಗಿ ಬರೆದು ನೀಡಿ, ಕಾಲಿಗೆ ಗೆಜ್ಜೆಕಟ್ಟಿ ಭಕ್ತಿಯಿಂದ ಹಾಡಿ ನಲಿದು, ಪರಮಾತ್ಮನನ್ನು ಒಲಿಸುವ ಮಾರ್ಗವನ್ನು ತೋರಿಕೊಟ್ಟ ನಮ್ಮ ಪ್ರೀತಿಯ ಶ್ರೀ ಪುರಂದರದಾಸರಿಗೆ ಅನಂತಾನಂತ ನಮಸ್ಕಾರಗಳು.

'ಸ್ವಾಮಿನ್, ನಾವೂ ಸಹ ನೀವು ಬರೆದ ದೇವರನಾಮಗಳನ್ನು ಹಾಡಿ ನಲಿಯುತ್ತ ಪರಮಾತ್ಮನನ್ನು ಒಲಿಸುವಂತೆ ಅನುಗ್ರಹಿಸಿ'

ಶ್ರೀಮದಾಚಾರ್ಯರ ಸಿದ್ಧಾಂತದ ತಿರುಳನ್ನು, ಅದರಲ್ಲಿಯೂ ವೈರಾಗ್ಯವೇ ಜ್ಞಾನಕ್ಕೆ ಕಾರಣ ಎಂಬ ಅದ್ಭುತ ಸಿದ್ಧಾಂತವನ್ನು ಮನದಟ್ಟು ಮಾಡಿಸುವ ಶ್ರೀ ಕನಕದಾಸರನ್ನು ಭಕ್ತಿಯಿಂದ ನೆನೆಯೋಣ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಸಿದ್ಧಾಂತದ ರಹಸ್ಯ ನಿಗೂಢ ತತ್ವಗಳನ್ನು ತಿಳಿಯಾದ ಭಾಷೆಯಲ್ಲಿ ಬರೆದಿಟ್ಟ ಜ್ಞಾನಿಮೂರ್ಧನ್ಯರಾದ ಶ್ರೀ ವಿಜಯದಾಸರು, ಶ್ರೀ

ಗೋಪಾಲದಾಸರು, ಶ್ರೀ ಜಗನ್ನಾಥದಾಸರಿಗೆ ಅನಂತಾನಂತ ನಮಸ್ಕಾರಗಳು.

‘ಪೂಜ್ಯರೇ, ತಾವು ಪ್ರಾರ್ಥಿಸಿದರೆ ಶ್ರೀಹರಿ ಬೇಗ ಒಲಿಯುತ್ತಾನೆ, ಸಂಸಾರದಲ್ಲಿ ಮುಳುಗಿರುವ ನಮ್ಮಲ್ಲಿ ವೈರಾಗ್ಯ ಮೂಡುವಂತೆ ಪರಮಾತ್ಮನಲ್ಲಿ ಪ್ರಾರ್ಥಿಸಿ, ನಮ್ಮನ್ನು ಸಂಸಾರದಿಂದ ಉದ್ಧರಿಸಿ’

**ಪೃಥ್ವೀಮಂಡಲಮಧ್ಯಸ್ಥಾಃ**
**ಪೂರ್ಣಬೋಧಮತಾನುಗಾಃ**
**ವೈಷ್ಣವಾ ವಿಷ್ಣುಹೃದಯಾಃ**
**ತಾನ್ ನಮಸ್ಯೇ ಗುರೂನ್ ಮಮ**

ಈ ಧರಣಿಮಂಡಲದ ಭೂಷಾಮಣಿಯಾದ ಭರತಭೂಮಿಯಲ್ಲಿ ಹುಟ್ಟಿ, ಶ್ರೀಮದಾಚಾರ್ಯರ ಶಾಸ್ತ್ರವನ್ನು ಜೀವನದ ಉಸಿರನ್ನಾಗಿ ಮಾಡಿಕೊಂಡ ಸಮಸ್ತ ವೈಷ್ಣವೋತ್ತಮರೂ ನಮ್ಮ ಗುರುಗಳು. ಆ ಎಲ್ಲ ಗುರುಗಳಿಗೆ ನಮ್ಮ ಅನಂತಾನಂತ ನಮಸ್ಕಾರಗಳು.

ನಮಗೆ ಜ್ಞಾನವನ್ನು ಕರುಣಿಸುವ, ವೇದವ್ಯಾಸದೇವರಿಂದ ನಮ್ಮ ಪರಮಗುರುಗಳ

ವರೆಗಿನ ಎಲ್ಲ ಗುರುಗಳ ಸನ್ನಿಧಾನವನ್ನು ಹೊತ್ತು, ನಮಗೆ ಪರಮಾತ್ಮನನ್ನು ತೋರಗೊಡುವ ನಮ್ಮ ಗುರುಗಳಿಗೆ ಸಮಗ್ರ ಜೀವದ ಭಕ್ತಿಯಿಂದ ಎರಗಿ ನಮ್ಮನ್ನು ನಾವು ಅವರಿಗೆ ಸಮರ್ಪಿಸಿಕೊಳ್ಳೋಣ.

ಆ ಎಲ್ಲ ಗುರುಗಳಲ್ಲಿ ನೆಲೆನಿಂತ ತತ್ವಾಭಿಮಾನಿದೇವತೆಗಳು, ಅವರಲ್ಲಿ ನೆಲೆ ನಿಂತ ನಮ್ಮ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು, ಅವರ ಅಂತರ್ಯಾಮಿಯಾದ ವಿದ್ಯಾಧೀಶನಾದ ಲಕ್ಷ್ಮೀಪತಿವೇದವ್ಯಾಸದೇವರು ನಮ್ಮ ಮೇಲೆ ಪೂರ್ಣಾನುಗ್ರಹವನ್ನು ಮಾಡಿ, ನಾವು ಸದಾ ಶಾಸ್ತ್ರಾಧ್ಯಯನತತ್ಪರರಾಗಿರುವಂತೆ, ಸದಾ ವಿಷ್ಣುಪೂಜಾಸಾಕ್ತರಾಗಿರುವಂತೆ, ಸದಾ ಅ ಶ್ರೀಹರಿಯ ನಾಮಸ್ಮರಣವನ್ನು ಗುಣಸ್ಮರಣವನ್ನು ಮಾಡುವಂತೆ ಅನುಗ್ರಹಿಸಲಿ, ನಮ್ಮನ್ನು ಸಂಸಾರದಿಂದ ಉದ್ಧರಿಸಲಿ.

ಶ್ರೀ ಗುರುಭ್ಯೋ ನಮಃ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name VISHWANANDINI**
- **Account Number 35368588017**
- **Account Type Current Account**
- **Bank State Bank of India**
- **Branch T. Narasipura, Mysore**
- **IFSC SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491